**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳ ಹಂಚಿಕೆ**

282 (530) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು?

2) ಪ್ರಾಧಿಕಾರದಲ್ಲಿ ವಿಲೇವಾರಿಗಾಗಿ ಬಾಕಿ ಇರುವ ನಿವೇಶನಗಳು ಎಷ್ಟು; ಎಷ್ಟು ವರ್ಷಗಳಿಂದ ಬಾಕಿ ಇವೆ;

3) ಬಾಕಿ ಉಳಿದಿರುವ ನಿವೇಶನಗಳನ್ನು ಯಾವಾಗ ಅರ್ಜಿ ಸಲ್ಲಿಸಿರುವವರಿಗೆ ಕೊಡಲಾಗುವುದು (ವಿವರ ನೀಡುವುದು)?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅಕ್ಟೋಬರ್ 1998ರಲ್ಲಿ ಪ್ರಾಧಿಕಾರವು 3200 ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲು ಅಧಿಸೂಚಿಸಲಾಗಿತ್ತು. ಈ ಅಧಿಸೂಚನೆಗೆದುರಾಗಿ ಸುಮಾರು 92,300 ಅರ್ಜಿಗಳನ್ನು ಪ್ರಾಧಿಕಾರವು ಸ್ವೀಕರಿಸಿರುತ್ತದೆ. ಈ ಅಧಿಸೂಚನೆ ಗೆದುರಾಗಿ ಹಂಚಿಕೆಯ ಕಾರ್ಯವು ಇತ್ತೀಚೆಗೆ ಪೂರ್ಣಗೊಂಡಿರುತ್ತದೆ. ಹಾಗೂ ಅಯಶಸ್ವಿ ಅರ್ಜಿದಾರರಿಗೆ ಠೇವಣಿ ಹಣವನ್ನು ಹಿಂದಿರುಗಿಸಲಾಗಿದೆ.

ಡಾ: ಬಿ. ಆರ್. ಅಂಬೇಡ್ಕರ್ ರವರ ಜನ್ಮ ಶತಾಬ್ದಿ ಲಂಗವಾಗಿ ಡಿಸೆಂಬರ್ 1998 ರಲ್ಲಿ 2000 ನಿವೇಶನಗಳನ್ನು ಹಂಚಿಕೆ ಮಾಡಲು ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಧಿಸೂಚಿಸಿದ್ದು, ಸುಮಾರು 5000 ಅರ್ಜಿಗಳು ಬಂದಿರುತ್ತವೆ. ನಿವೇಶನಗಳು ಲಭ್ಯವಿಲ್ಲದ ಕಾರಣ, ಈ ಅಧಿಸೂಚನೆಗೆದುರಾಗಿ ಹಂಚಿಕೆ ಮಾಡಲು ಸಾಧ್ಯವಾಗಿರುವುದಿಲ್ಲ. ಪ್ರಸಕ್ತ ವರ್ಷದಲ್ಲಿ ಅರ್ಹತೆಯ ಪಟ್ಟಿಯನ್ನು ಇತ್ಯರ್ಥಗೊಳಿಸಿದ ನಂತರ ಹಂಚಿಕೆ ಕಾರ್ಯವು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

**ಮಲಪ್ರಭಾ ಎಡದಂಡೆ ಕಾಲುವೆ 97ನೇ ಕಿ.ಮೀ. ನಲ್ಲಿ ಸೇತುವೆ ನಿರ್ಮಾಣ**

283 (313) ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಭಾರೀ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಲಪ್ರಭಾ ಎಡದಂಡೆ ಕಾಲುವೆಯ 97ನೇ ಕಿ.ಮೀ. ದಲ್ಲಿ ಸೇತುವೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರೈತರಿಗಾಗುವ ತೊಂದರೆಯನ್ನು ನೀಗಿಸಲು ಸರ್ಕಾರದವರು ಈ ವರ್ಷದಲ್ಲಿಯೇ ಬೇರೆ ಸೇತುವೆ ಕಟ್ಟಿಸಿಕೊಡಲು ಸರ್ಕಾರ ತೀರ್ಮಾನಿಸಿದೆಯೇ;

ಇ) ಯಾವಾಗ ಕಾಮಗಾರಿ ಪ್ರಾರಂಭಿಸಿ ಕೆಲಸ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಕೆ. ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) :

ಅ) ಬಂದಿದೆ.